‘ದೈವದತ್ತ ಅಂಗಗಳ ಜೊತೆ ಕೃತಕ ಅಂಗಗಳು ಮತ್ತು ಸಾಧನಗಳನ್ನು ಯಾರು ಮತ್ತು ಯಾವ ದಿನಾಂಕದಂದು ಅಳವಡಿಸಿದರೆಂದು ಇಲ್ಲಿ ಕೇಳಲಾಗುತ್ತಿದೆ. ಒಡೆಯನೇ ನೀನು ದಯಪಾಲಿಸಿದ ಸಮಯದಲ್ಲಿ ನಿನ್ನ ಮಕ್ಕಳೇ ಆದ ನಾವು ಈ ಕ್ರಿಯೆಗೊಳಗಾಗಿದ್ದೇವೆ. ಇದು ಉದ್ಧಟತನದಿಂದಲ್ಲ ಎಂದು ಖಾತ್ರಿ ಕೊಡಬಲ್ಲೆ. ಸಮಯದ ಒಡೆಯನಾದ ನಿನಗೆ ನಾವು ಹೇಳುವುದೇನಿದೆ? ಈ ಅಮುಖ್ಯ ದಿನಾಂಕಗಳು ನಮ್ಮಲ್ಲಿ ಯಾರಿಗೂ ಗೊತ್ತಿಲ್ಲ. ಇನ್ನು ಅಂಗಾಂಗಗಳ ಅಳವಡಿಸಿದವರ ವಿಳಾಸಕ್ಕೆ ಬಂದರೆ ಭೂಲೋಕದಲ್ಲಿ ಅನೇಕ ಸ್ಥಳಗಳ ಹೆಸರುಗಳು ಬದಲಾಗುತ್ತಲೇ ಇವೆ. ಒಬ್ಬ ದೇವರ ಮನೆ ಇನ್ನೊಬ್ಬ ದೇವರ ಮನೆಯಾಗುತ್ತಿದೆ. ದೇವರ ವಿಳಾಸಗಳೇ ಅಲ್ಲಿ ಬದಲಾಗುತ್ತಿವೆ. ಇನ್ನು ಮನುಷ್ಯರದ್ದೇನು ಲೆಕ್ಕ ಪ್ರಭು?’ ಹಿರಿಯನ ಮುಖದ ಮೇಲೆ ನಗು ಲಾಸ್ಯವಾಡಿತಲ್ಲದೆ ದೇವಲೋಕದ ದಿಗ್ದಿಗಂತಗಳಿಂದ ದೈವದ ಹೂನಗೆಯ ಮರ್ಮರ ಕೇಳಿಸಿತು.

‘ಗುಂಡು ಹೊಕ್ಕಿರುವ ಯೋಧನ ವಿಷಯದಲ್ಲಿ ನಾವೆಲ್ಲರೂ ನಿನ್ನ ಕ್ಷಮೆ ಯಾಚಿಸುತ್ತೇವೆ. ಯುದ್ಧಗಳು ಮಾನವ ಸಂಕುಲಕ್ಕಷ್ಟೇ ಅಲ್ಲ, ಸೃಷ್ಟಿಕರ್ತನಾದ ನಿನಗೂ ನಾವು ಮಾಡಿದ ಅಪಮಾನ ಪ್ರಭುವೇ. ದೈವ ವಿರೋಧಿಗಳು ಮಾತ್ರ ಯುದ್ಧ ಮಾಡುತ್ತಾರೆ. ಇನ್ನು ಮುಂದೆ ಯಾವುದೇ ಕಾರಣಕ್ಕಾಗಿ ಯುದ್ಧಗಳಿರದಂತೆ ನಡೆದುಕೊಳ್ಳುತ್ತೇವೆ, ಕರುಣಾಳುವೇ.’

‘ವೈಜ್ಞಾನಿಕ ಆವಿಷ್ಕಾರಗಳೆಲ್ಲ ನಿನ್ನ ಸೃಷ್ಟಿಯಲ್ಲಿರುವ ವೈಚಿತ್ರ್ಯಗಳ ಹುಡುಕಾಟವೇ ಆಗಿದೆ. ಅಲೆಗ್ಸಾಂಡರ್ ಫ್ಲೆಮಿಂಗನ ಪೆನ್ಸಿಲಿನ್ ಔಷಧದ ಸಂಶೋಧನೆ ಅವನ ತಪಸ್ಸಿದ್ದಂತೆ ಪ್ರಭುವೇ. ಇದು ನಿನಗೆ ಗೊತ್ತಿಲ್ಲದ್ದೇನಲ್ಲ. ಈ ಸಂಶೋಧನೆಗಳು ಅತಿಗೆ ಹೋಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಮನುಕುಲಕ್ಕೆ ಬಿಡು ದೇವ. ಇಂದಲ್ಲ ನಾಳೆ ಮನುಕುಲದ ದಾರಿ ನೇರವಾಗಲಾರದೇ? ಲಕ್ಷಾಂತರ, ಕೋಟ್ಯಾಂತರ ವರ್ಷಗಳೆಲ್ಲ ನಿನಗೆ ಕ್ಷಣಕ್ಕೆ ಸಮನಲ್ಲವೇ ದೇವ?’

ಕೊನೆಗೆ ಅಜ್ಜನ ಗಮನ ಪ್ಲಾಸ್ಟಿಕ್ ಸರ್ಜರಿಗಳ ಮಹಿಳೆಯತ್ತ ಹೋಯಿತು. ‘ಕ್ಷಣಿಕತೆಯಿಂದಲೇ ಸೌಂದರ್ಯದ ಸವಿ ಹೆಚ್ಚುವುದು. ಕಾಲ ಅಂತರಂಗವನ್ನು ಮಾಗಿಸುತ್ತದೆ. ಮೈಮರೆವಿನಿಂದ, ಪೆದ್ದುತನದಿಂದ ಆಗಿರುವ ಪ್ರಮಾದಕ್ಕೆ ದೈವದ ಕ್ಷಮೆ ಕೇಳು ಮಗಳೇ. ಪ್ಲಾಸ್ಟಿಕ್ ಸರ್ಜರಿಯು ದೇವರ ಇಲ್ಲದ ತಪ್ಪನ್ನು ತಿದ್ದಿದಂತೆ. ಸಣ್ಣ ಹಣತೆಯೊಂದು ಸೂರ್ಯನಿಗೆ ಬೆಳಕು ತೋರಿದಂತೆ. ನೀರ ಹನಿಯೊಂದು ಸಾಗರಕ್ಕೆ ಸೆಡ್ಡು ಹೊಡೆದಂತೆ. ನಡೆ ನುಡಿಯಿಂದ ನಮ್ಮ ವ್ಯಕ್ತಿತ್ವಕ್ಕೆ ಘಮ ಬರಬಹುದೇ ವಿನಃ ಮೈಗೆ ಪೂಸಿಕೊಳ್ಳುವ ಸುಗಂಧ ದ್ರವ್ಯಗಳಿಂದಲ್ಲ. ಸರಳತೆಯೆಂಬುದು ಸತ್ಯ, ಅಹಿಂಸೆಗಳಷ್ಟೇ ಮುಖ್ಯ’ ಎಂದು ನುಡಿದು ಅಜ್ಜ ಯೋಚನಾಮಗ್ನನಾದನು. ಆಕೆ ಒಪ್ಪಿದೆ ಎಂಬಂತೆ ತಲೆ ಬಾಗಿ ದೈವಕ್ಕೆ ಕ್ಷಮೆ ಕೋರಿ ಆತ್ಮಾವಲೋಕನಕ್ಕೆ ತೊಡಗಿದಳು.

ದೈವವು ಅಜ್ಜನನ್ನು ಉದ್ದೇಶಿಸಿ ‘ಅರಿವೆಂಬುದು ಅನೇಕ ಸಲ ಅಪರಿಪೂರ್ಣವಾಗಿರುತ್ತದೆ ಮತ್ತು ಬದಲಾಗುತ್ತಿರುತ್ತದೆ. ಪರಿಪೂರ್ಣತೆಯೆಡಗಿನ ಪಯಣವೇ ಬದುಕು. ನೀನಾರೋ ಪ್ರವಾದಿಯಂತಿರುವೆ. ನಾನು ನಿನ್ನನ್ನು ಪ್ರವಾದಿಯಾಗಿಯೇನೂ ಭೂಲೋಕಕ್ಕೆ ಕಳುಹಿಸಿರಲಿಲ್ಲ. ಆದರೆ ಜಿಗುಟು ಸ್ವಭಾವದ ನೀನು ನಿನ್ನ ಪ್ರಯೋಗಗಳ ಮುಖಾಂತರವೇ ಪ್ರವಾದಿಯಾಗಿರುವ ಹಾಗೆ ಕಾಣುತ್ತದೆ. ನಿನ್ನ ಮಾತುಗಳನ್ನು ಮೆಚ್ಚಿದ್ದೇನೆ. ಭೂಲೋಕದ ಸಂಪನ್ಮೂಲಗಳ ಬಳಕೆಯಲ್ಲಿ ನಿನ್ನಂಥ ಜುಗ್ಗ ಸಿಗುವುದು ಕಷ್ಟ. ಆದರೆ ನಿನ್ನಂಥವರು ನನಗೆ ಪಂಚಪ್ರಾಣ. ನನ್ನನ್ನೂ ಸೇರಿ ಎಲ್ಲರೂ ನಿನ್ನಿಂದ ಪ್ರಭಾವಿತರಾಗಿದ್ದೇವೆ. ಕ್ಷಮೆಗಿಂತ ದೊಡ್ಡ ಸುಧಾರಣಾ ಮಾರ್ಗವಿಲ್ಲವೆಂಬುದನ್ನು ನೀನು ಮನ ಮುಟ್ಟುವಂತೆ ನಿರೂಪಿಸಿದ್ದೀಯ. ಇದೆಂಥ ದೊಡ್ಡ ಪಾಠವಯ್ಯ ಹಿರಿಯ! ನೀನೇ ಈ ಎಲ್ಲ ಜನರಿಗೆ ಗುರುವಾಗಿ ಗುರುಮನೆಗೆ ಕರೆದೊಯ್ದು ಋಜು ಮಾರ್ಗವ ತೋರು. ನಿನ್ನಂಥ ಗುರುವಿರುವಲ್ಲಿ ಅರಮನೆಯೇ ವ್ಯರ್ಥ’ ಎಂದಿತು ದೈವ.

ಉರಿಬಿಸಿಲು ತಣ್ಣಗಾಯಿತು. ತಂಗಾಳಿ ಬೀಸಿತು. ಶೆಡ್ಡಿನಿಂದ ಮುಕ್ತರಾದ ಜನ ಬಲೂನುಗಳಂತೆ ಹಗುರಾಗಿ ಹಾರಾಡಿದರು. ಮಹಿಳೆಯರು ಮಕ್ಕಳೊಡಗೂಡಿ ಹಾಡಲು ಸ್ವರ್ಗವಲ್ಲೇ ಅರಳಿತು. ಅಜ್ಜನು ಕಣ್ಣಲ್ಲಿ ಕರುಣೆ ತುಂಬಿಕೊಂಡು ಕಿವಿಯಿಂದ ಕಿವಿಗೆ ಮುಖದಗಲಕ್ಕೂ ನಗುತ್ತ ಜನಸಮೂಹವನ್ನು ಕರೆದುಕೊಂಡು ಗುರುಮನೆಯತ್ತ ನಡೆದ.

●